**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 85/2013**

ದಿನಾಂಕಃ 24.03.2022
ಸಾಕ್ಷಿಗೆ ಪ್ರಮಾಣ ವಚನ
ಬೋಧಿಸಲಾಯಿತು.

ಪ್ರಾ.ಸಾಃ 9 (ಚಾ.ಸಾ.20 )

| | | |
|---|---|---|
| ಹೆಸರು | ಃ | ಗೌತಮ್ |
| ತಂದೆಯ ಹೆಸರು | ಃ | ಜಯರಾಂ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ಆರಕ್ಷಕ ನಿರೀಕ್ಷರು |
| ವಾಸ ಸ್ಥಳ | ಃ | ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ನವೆಂಬರ್ 2010 ರಿಂದ ಮಾರ್ಚ್ 2011 ರವೆರೆಗ ರಾಮನಗರದ ಲೋಕಾಯುಕ್ತ ಕಚೇರಿಯಲ್ಲಿ ಆರಕ್ಷಕ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ತಾಃ 14.12.2010 ರಂದು ಬೆಳಿಗ್ಗೆ 9 ಗಂಟೆಗೆ ನಾನು ಲೋಕಾಯುಕ್ತ ಕಚೇರಿಯಲ್ಲಿದ್ದಾಗ ಪಿರ್ಯಾದಿ ಕಚೇರಿಗೆ ಹಾಜರಾಗಿ 1 ನೇ ಆರೋಪಿ ಲಂಚ ಕೇಳುತ್ತಿರುವ ಬಗ್ಗೆ ದೂರನ್ನು ನೀಡಿದ್ದು, ಸದರಿ ದೂರನ್ನು ಠಾಣಾ ಪ್ರಕರಣ ಸಂಖ್ಯೆ 11/2010 ನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ. ಅದರಲ್ಲಿ ನನ್ನ ಹಿಂಬರಹ ಮತ್ತು ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 39 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು. ನಿಪಿ.1 ದೂರಿನೊಂದಿಗೆ ಪಿರ್ಯಾದಿ ತಹಶೀಲ್ದಾರ್ ಕಚೇರಿಗೆ ನೀಡಿದ ಅರ್ಜಿ ಹಾಗೂ ನ್ಯಾಯಾಲಯದ

ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದರು. ಆ ದಾಖಲೆಗಳನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಒಟ್ಟಾಗಿ ನಿಪಿ.2 ಎಂದು ಗುರುತಿಸಲಾಯಿತು.

3. ನಂತರ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ಉಪನಿರ್ದೇಶಕರು, ಪಶುಪಾಲನಾ ಇಲಾಖೆ ಇವರಿಗೆ ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಲು ಇಬ್ಬರು ಸರ್ಕಾರಿ ನೌಕರರನ್ನು ಕಳುಹಿಸಿಕೊಡುವಂತೆ ಪತ್ರ ಬರೆದಿದ್ದೆನು. ಆ ಪತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗ ಕ್ರಮವಾಗಿ ನಿಪಿ.40 ಮತ್ತು ನಿಪಿ.41 ಎಂದು ಗರುತಿಸಲಾಯಿತು. ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ.40(ಎ) ಹಾಗೂ ನಿಪಿ.41(ಎ) ಎಂದು ಗುರುತಿಸಲಾಯಿತು. ಅದರಂತೆ ಸದರಿ ಕಚೇರಿಗಳಲ್ಲಿ ಕೆಲಸ ಮಾಡುತ್ತಿದ್ದ ಹೆಚ್.ಕೆ.ನಾಗೇಶ ಮತ್ತು ಕೆಂಪೇಗೌಡ ಇವರುಗಳು ನನ್ನ ಮುಂದೆ ಅದೇ ದಿನ ಬೆಳಿಗ್ಗೆ 9.45 ಕ್ಕೆ ಹಾಜರಾದಾರು.

4. ಆ ಇಬ್ಬರೂ ಪಂಚರಿಗೆ ನನ್ನ ಪರಿಚಯ ಮಾಡಿಕೊಂಡು, ಈ ಪ್ರಕರಣದ ಸಾರಾಂಶವನ್ನು ವಿವರಿಸಿ ಪಿರ್ಯಾದಿಯ ಪರಿಚಯವನ್ನು ಮಾಡಿಕೊಟ್ಟೆನು ಹಾಗೂ ದೂರಿನ ಪ್ರತಿಯನ್ನು ಓದಲು ಕೊಟ್ಟೆನು. ದೂರನ್ನು ಓದಿದ ನಂತರ ಸದರಿ ಪಂಚರು ದೂರಿನಲ್ಲಿರುವ ಅಂಶಗಳು ನಿಜವೇ ಎಂದು ಪಿರ್ಯಾದಿಯನ್ನು ಕೇಳಿ ಖಚಿತಪಡಿಸಿಕೊಂಡರು. ಆ ಇಬ್ಬರು ಪಂಚರಾಗಿ ನಮ್ಮೊಂದಿಗೆ ಸಹಕರಿಸಲು ಒಪ್ಪಿಕೊಂಡರು. ಹೆಚ್.ಕೆ.ನಾಗೇಶ ಇವರನ್ನು ಪಂಚ – 1 ಎಂದು ಮತ್ತು ಕೆಂಪೇಗೌಡ ಇವರನ್ನು ಪಂಚ – 2 ಎಂದು ನೇಮಿಸಿದೆನು.

5. ಪಿರ್ಯಾದಿಗೆ ಲಂಚವಾಗಿ ಕೊಡಲು ತಂದಿದ್ದ ಹಣವನ್ನು ಹಾಜರುಪಡಿಸುವಂತೆ ಕೇಳಿದ ಮೇರೆಗೆ ಪಿರ್ಯಾದಿ ಸದರಿಹಣವನ್ನು ಹಾಜರುಪಡಿಸಿದರು. ನಂತರ ಸದರಿ ಹಣವನ್ನು ಪಂಚ – 1 ನಾಗೇಶ ಇವರಿಗೆ ಕೊಟ್ಟು ಅವುಗಳನ್ನು ಪರಿಶೀಲಿಸಿ, ಅವುಗಳನ್ನು ಎಣಿಸುವಂತೆ ಹೇಳಿದ ಮೇರೆಗೆ ಎಣಿಸಿ, ಅವರು ಸದರಿ ಹಣ ರೂ.500 ಮುಖಬೆಲೆಯ 10 ನೋಟುಗಳು ಅಂದರೆ ಒಟ್ಟಾಗಿ ರೂ.5 ಸಾವಿರ ಹಣ ಇರುವುದಾಗಿ ತಿಳಿಸಿದರು. ನಂತರ ಪಂಚ – 2 ಕೆಂಪೇಗೌಡರವರಿಗೆ ಸದರಿ ನೋಟುಗಳನ್ನು ಕ್ರಮಸಂಖ್ಯೆ ಮತ್ತು ಮುಖಬೆಲೆಯನ್ನು ಪರಿಶೀಲಿಸುವಂತೆ ಹೇಳಿದ್ದು ಅವರು ಅದನ್ನು ಪರಿಶೀಲಿಸಿ, ಅದರ ಕ್ರಮಸಂಖ್ಯೆ ಮತ್ತು ಮೌಲ್ಯವನ್ನು ಪಂಚ – 2 ಒಂದು ಬಿಳಿ ಕಾಗದ ಮೇಲೆ ಬರೆದುಕೊಂಡರು.

ಆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.30 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.30(ಸಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಪಿರ್ಯಾದಿ ಹಾಜರುಪಡಿಸಿದ ನೋಟುಗಳನ್ನು ನೋಡಿದರೆ ಗುರುತಿಸಬಲ್ಲೆ. ಆ ನೋಟುಗಳನ್ನು ಈಗಾಗಲೇ ಎಂ.ಒ.1 ಎಂದು ಗುರುತಿಸಲಾಗಿದೆ.

6. ಎಂ.ಒ.1 ನೋಟುಗಳ ಮೇಲೆ ನಮ್ಮ ಸಿಬ್ಬಂದಿ ಬೋರೇಗೌಡ ಇವರ ಮುಖಾಂತರ 2 ಬದಿಗೆ ಪಿನಾಪ್ತಲಿನ್ ಪುಡಿಯನ್ನು ಸವರಲಾಯಿತು. ಈ ನೋಟುಗಳನ್ನು ಪಂಚ – 1 ಇವರ ಕೈಗೆ ಕೊಟ್ಟು ಅದನ್ನು ನಿಪಿ.30 ರೊಂದಿಗೆ ತಾಳೆ ಮಾಡಿ ನೋಡುವಂತೆ ತಿಳಿಸಿದೆನು. ಅದರಂತೆ ಪಂಚ – 1 ಆ ನೋಟುಗಳನ್ನು ಪರಿಶೀಲಿಸಿ ನಿಪಿ.30 ರೊಂದಿಗೆ ತಾಳೆ ಮಾಡಿ ದೃಡಪಡಿಸಿದರು.

7. ಪಿರ್ಯಾದಿ ಧರಿಸಿದ್ದ ಶರ್ಟಿನ ಎಡ ಜೇಬಿನಲ್ಲಿ ಯಾವುದೇ ಕಾಗದ ಅಥವಾ ಹಣ ಇರುವ ಬಗ್ಗೆ ಪರಿಶೀಲಿಸಿ ನೋಡುವಂತೆ ಪಂಚ – 2 ಇವರಿಗೆ ಹೇಳಿದ್ದು, ಅದರಂತೆ ಪಂಚ – 2 ಪರಿಶೀಲಿಸಿ ಅಲ್ಲಿ ಯಾವುದೇ ವಸ್ತು ಅಥವಾ ಹಣ ಇಲ್ಲದೇ ಇರುವುದನ್ನು ಖಾತರಿಪಡಿಸಿದರು.

8. ನನ್ನ ಸೂಚನೆಯ ಮೇರೆಗೆ ಪಂಚ – 1 ರವರು ತಮ್ಮ ಕೈಯಲ್ಲಿದ್ದ ಪಿನಾಪ್ತಲಿನ್ ಪುಡಿ ಸವರಿದ ಎಂ.ಒ.1 ನೋಟುಗಳನ್ನು ಪಿರ್ಯಾದಿಯ ಶರ್ಟಿನ ಎಡಜೇಬಿನಲ್ಲಿ ಇರಿಸಿದರು. ನಂತರ ಪಿರ್ಯಾದಿಗೆ ಸೋಲೂರಿನ ಕಂದಾಯ ನಿರೀಕ್ಷಕರ ಕಚೇರಿಗೆ ಹೋದಾಗ ಈ ಹಣವನ್ನು ಆರೋಪಿ ಲಂಚವಾಗಿ ಕೇಳಿದಾಗ ಮಾತ್ರ ಕೊಡುವಂತೆ ಸೂಚನೆ ನೀಡಿದೆನು.

9. ನಂತರ ನಮ್ಮ ಲೋಕಾಯುಕ್ತ ಸಿಬ್ಬಂದಿ - ಬೋರೇಗೌಡರವರ ಮುಖಾಂತರ ಒಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಲಾಯಿತು. ಅದರಲ್ಲಿ ಮಾದರಿಗಾಗಿ ಸ್ವಲ್ಪ ಭಾಗವನ್ನು ಒಂದು ಬಾಟಲ್‌ನಲ್ಲಿ ಹಾಕಿ ಡಬ್ಲ್ಯೂ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಳ್ಳಲಾಯಿತು. ಆ ಬಾಟಲ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂ.ಒ.6 ಎಂದು ಗುರುತಿಸಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿಯಿರುವ ಚೀಟಿ ಇದೆ.

**10.** ಉಳಿದ ದ್ರಾವಣದಲ್ಲಿ ಪಂಚ – 1 ಇವರ ಕೈ ಬೆರಳನ್ನು ಅದ್ದಿ ತೊಳೆದಾಗ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ಒಂದು ಬಾಟಲ್‌ನಲ್ಲಿ ಹಾಕಿ ಡಬ್ಲ್ಯೂ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಳ್ಳಲಾಯಿತು. ಆ ಬಾಟಲ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂ.ಓ.7 ಎಂದು ಗುರುತಿಸಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿಯಿರುವ ಚೀಟಿ ಇದೆ.

**11.** ನಂತರ ಪಂಚರು ಮತ್ತು ಪಿರ್ಯಾದಿಗೆ ಪಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೋನೇಟ್ ಇವುಗಳ ರಾಸಾಯನಿಕ ಗುಣಧರ್ಮಗಳ ಬಗ್ಗೆ ಮಾಹಿತಿ ನೀಡಿದೆನು.

**12.** ನಂತರ ಪಿರ್ಯಾದಿಗೆ ಸೋಲೂರು ಕಚೇರಿಯಲ್ಲಿ ಆರೋಪಿತರು ಒಂದು ವೇಳೆ ಸರ್ಕಾರಿ ಅಧಿಕಾರಿ ಲಂಚದ ಹಣವನ್ನು ಸ್ವೀಕರಿಸಿದರೆ ಅವರು ಲಂಚದ ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎನ್ನುವುದನ್ನು ಗಮನಿಸಬೇಕು ಹಾಗೂ ನಂತರ ಕಚೇರಿಯಿಂದ ಹೊರಬಂದು ತನ್ನ ಮುಖವನ್ನು ಕರವಸ್ತ್ರದಿಂದ ಒರೆಸಿಕೊಂಡು ಸೂಚನೆ ನೀಡುವಂತೆಯೂ ತಿಳಿಸಿದೆನು.

**13.** ಪಿರ್ಯಾದಿಗೆ ಒಂದು ವಾಯ್ಸ್ ರೆಕಾರ್ಡರನ್ನು ಕೊಟ್ಟು ಆರೋಪಿಯನ್ನು ಭೇಟಿಯಾಗುವಾಗ ಆ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿಕೊಂಡು ಅಲ್ಲಿ ನಡೆಯುವ ಸಂಭಾಷಣೆಯನ್ನು ದಾಖಲಿಸಿಕೊಳ್ಳುವಂತೆ ತಿಳಿಸಿದೆನು.

**14.** ನಂತರ ಪಂಚ – 1 ಇವರಿಗೆ ತಾವು ಪಿರ್ಯಾದಿಯೊಂದಿಗೆ ಇದ್ದು ಆರೋಪಿಯನ್ನು ಭೇಟಿಯಾದಾಗ ಅಲ್ಲಿ ನಡೆಯುವ ಸಂಭಾಷಣೆ ಹಾಗೂ ಎಲ್ಲಾ ವಿದ್ಯಾಮಾನಗಳನ್ನು ಗಮನಿಸುವಂತೆ ಸೂಚಿಸಿದೆನು.

**15.** ನಂತರ ನಾವೆಲ್ಲರೂ ನಮ್ಮ ನಮ್ಮ ಕೈಗಳನ್ನು ಸೋಪಿನ ನೀರಿನಲ್ಲಿ ಸ್ವಚ್ಛವಾಗಿ ತೊಳೆದುಕೊಂಡೆವು. ಈ ಮೇಲಿನ ಎಲ್ಲಾ ಪ್ರಕ್ರಿಯೆಗಳ ವೇಳೆಯಲ್ಲಿ ಕೆಲವು ಫೋಟೋಗಳನ್ನು ತೆಗೆಯಲಾಗಿತ್ತು. ಸದರಿ ಫೋಟೋಗಳಾದ ನಿಪಿ.5 ರಿಂದ ನಿಪಿ.13 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

16. ಈ ಬಗ್ಗೆ ಒಂದು ವಿವರವಾದ ಪ್ರಾಯೋಗಿಕ ಪಂಚನಾಮೆ ಬರೆಯಲಾಯಿತು. ಆ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಡಿ) ಎಂದು ಗುರುತಿಸಲಾಯಿತು. ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆ 20/10 ರಲ್ಲಿ ಅಳವಡಿಸಲಾಯಿತು.

17. ನಂತರ ನಾನು, ಪಂಚ – 1 ಮತ್ತು ಪಂಚ – 2, ಪಿರ್ಯಾದಿ ಮತ್ತು ಸಿಬ್ಬಂದಿಗಳೊಂದಿಗೆ ಸರ್ಕಾರಿ ವಾಹನದಲ್ಲಿ ಬೆಳಿಗ್ಗೆ 11 ಗಂಟೆಗೆ ನಮ್ಮ ಕಚೇರಿಯಿಂದ ಹೊರಟು ಸೋಲೂರು ಗ್ರಾಮವನ್ನು ಮಧ್ಯಾಹ್ನ 12.15 ಗಂಟೆಗೆ ತಲುಪಿದೆವು. ನಮ್ಮ ವಾಹನವನ್ನು ಆರೋಪಿತರ ಕಚೇರಿಯಿಂದ ಸುಮಾರು 500 ಅಡಿ ದೂರದಲ್ಲಿ ನಿಲ್ಲಿಸಿ, ನಾವು ಇಳಿದೆವು. ಅಲ್ಲಿಂದ ಪಿರ್ಯಾದಿ ಮತ್ತು ಪಂಚ – 1 ರವರಿಗೆ ಪುನಃ ಸೂಚನೆಗಳನ್ನು ನೀಡಿ ಆರೋಪಿತರ ಕಚೇರಿಗೆ ಹೋಗುವಂತೆ ತಿಳಿಸಿದೆನು. ಅದರಂತೆ ಅವರಿಬ್ಬರು ಅಲ್ಲಿಗೆ ಹೋದರು. ನಾನು, ಪಂಚ 2 ಮತ್ತು ಸಿಬ್ಬಂದಿಯೊಂದಿಗೆ ಆರೋಪಿತರ ಕಚೇರಿಯ ಹೊರಭಾಗದಲ್ಲಿ ಗೌಪ್ಯವಾಗಿ ಕಾಯುತ್ತಿದ್ದೆವು.

18. ಮಧ್ಯಾಹ್ನ ಸುಮಾರು 12.35 ಗಂಟೆಗೆ ಪಿರ್ಯಾದಿಯು ಆರೋಪಿತರ ಕಚೇರಿಯಿಂದ ಹೊರ ಬಂದು ತನ್ನ ಮುಖವನ್ನು ಕರವಸ್ತ್ರದಿಂದ ಒರೆಸಿಕೊಂಡು ನಮಗೆ ಸೂಚನೆ ನೀಡಿದರು.

19. ತಕ್ಷಣ ನಾನು, ಪಂಚ – 2 ಮತ್ತು ಸಿಬ್ಬಂದಿಯೊಂದಿಗೆ ಆರೋಪಿತರ ಕಚೇರಿಯ ಒಳಗೆ ಹೋದೆವು. ಪಿರ್ಯಾದಿ ಅಲ್ಲಿದ್ದ ಒಬ್ಬ ವ್ಯಕ್ತಿಯನ್ನು ತೋರಿಸಿ ಆತನೇ ಆರೋಪಿತ ಅಧಿಕಾರಿ ನಾಗರಾಜು ಎಂದು ತಿಳಿಸಿ, ಅದೇ ಕೊಠಡಿಯಲ್ಲಿದ್ದ ಮತ್ತೊಬ್ಬ ವ್ಯಕ್ತಿಯನ್ನು ತೋರಿಸಿ, ಇವರು ಆರೋಪಿತ ಅಧಿಕಾರಿಯ ಖಾಸಗಿ ಸಹಾಯಕ - ವನಸ್ವಾಮಿ ಎಂದು ಹೇಳಿದರು. ಪಿರ್ಯಾದಿಯು ತನ್ನ ಅತ್ತೆಯ ಜಮೀನಿನ ಖಾತೆ ಬದಲಾವಣೆ ಮಾಡಿಕೊಡಲು ಆರೋಪಿತ ಅಧಿಕಾರಿ ರೂ.5000 ತಂದಿರುವ ಬಗ್ಗೆ ನನ್ನನ್ನು ಕೇಳಿದ್ದು, ನಾನು ಹಣವನ್ನು ತಂದಿರುವುದಾಗಿ ತಿಳಿಸಿರುತ್ತೇನೆ, ಆಗ ಆರೋಪಿ - ನಾಗರಾಜುರವರು ತಮ್ಮ ಖಾಸಗಿ ಸಹಾಯಕ ವನಸ್ವಾಮಿರವರನ್ನು ಕರೆದು ಸದರಿ ಹಣವನ್ನು ಪಡೆದು ಇಟ್ಟುಕೊಳ್ಳುವಂತೆ ತಿಳಿಸಿದ

ಮೇರೆಗೆ ವನಸ್ವಾಮಿರವರು ನನ್ನನ್ನು ರೂ.5 ಸಾವಿರ ಹಣವನ್ನು ಕೇಳಿದ್ದು, ಆಗ ನಾನು ನನ್ನ ಶರ್ಟಿನ ಜೇಬಿನಲ್ಲಿದ್ದ ಪಿನಾಪ್ತಲಿನ್ ಲೇಪಿತ ರೂ.5 ಸಾವಿರ ಹಣವನ್ನು ನೀಡಿರುತ್ತೇನೆ, ಅವರು ಅದನ್ನು ತನ್ನ ಬಲಗೈಯಿಂದ ಪಡೆದುಕೊಂಡು, ತನ್ನ ಪ್ಯಾಂಟಿನ ಬಲ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ, ನಂತರ ಕಚೇರಿಯಿಂದ ಹೊರ ಬಂದು ಸೂಚನೆ ನೀಡಿರುತ್ತೇನೆ ಎಂದು ತಿಳಿಸಿದರು.

**20.** ನಂತರ ನನ್ನ ಸೂಚನೆಯ ಮೇರೆಗೆ ಸಿಬ್ಬಂದಿಗಳು ಇಬ್ಬರು ಆರೋಪಿಗಳನ್ನು ಸುತ್ತುವರೆದಿರುತ್ತಾರೆ. ನಂತರ ಪಂಚ – 1 ರವರನ್ನು ವಿಚಾರಿಸಿದಾಗ ಅವರು ಸಹ ಪಿರ್ಯಾದಿ ಹೇಳಿದ ವಿಷಯವೆಲ್ಲಾ ಸತ್ಯ ಎಂದು ತಿಳಿಸಿದರು.

**21.** ನಂತರ ಆರೋಪಿಗಳಿಗೆ ನಮ್ಮ ಹಾಗೂ ಪಂಚರ ಪರಿಚಯ ಮಾಡಿಕೊಂಡು, ಆರೋಪಿತರನ್ನು ವಶಕ್ಕೆ ಪಡೆದಿರುವ ಬಗ್ಗೆ ಹಾಗೂ ತನಿಖೆಗೆ ಸಹಕರಿಸುವಂತೆ ಕೋರಿದೆನು. ನಂತರ ಆರೋಪಿತರ ಹೆಸರು, ವಿಳಾಸ ಕೇಳಿ ಬರೆದುಕೊಳ್ಳಲಾಯಿತು.

**22.** ನಂತರ ನಾನು ನಮ್ಮ ಸಿಬ್ಬಂದಿ ಬೋರೆಗೌಡರ ಮೂಲಕ 2 ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಲಾಯಿತು. ಅದರಲ್ಲಿ ಮಾದರಿಗಾಗಿ ಸ್ವಲ್ಪ ಭಾಗವನ್ನು ಒಂದು ಬಾಟಲ್‌ನಲ್ಲಿ ಹಾಕಿ ಡಬ್ಲ್ಯೂ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಳ್ಳಲಾಯಿತು. ಆ ಬಾಟಲ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂ.ಒ.8 ಎಂದು ಗುರುತಿಸಲಾಗಿದೆ. ಅದರ ಮೇಲೆ ನನ್ನ ಸಹಿ ಇದೆ.

**23.** ಉಳಿದ ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಆರೋಪಿ - ವನಸ್ವಾಮಿರವರ ಬಲಗೈಯನ್ನು ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ಒಂದು ಬಾಟಲ್‌ನಲ್ಲಿ ಹಾಕಿ ಡಬ್ಲ್ಯೂ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಳ್ಳಲಾಯಿತು. ಆ ಬಾಟಲ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂ.ಒ.2 ಎಂದು ಗುರುತಿಸಲಾಗಿದೆ. ಅದರ ಮೇಲೆ ನನ್ನ ಸಹಿ ಇದೆ.

24. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಆರೋಪಿ - ವನಸ್ವಾಮಿರವರ ಎಡಗೈಯನ್ನು ಅದ್ದಿ ತೊಳೆದಾಗ ಅದು ಯಾವುದೇ ಬಣ್ಣಕ್ಕೆ ತಿರುಗಿರುವುದಿಲ್ಲ. ಆ ದ್ರಾವಣವನ್ನು ಒಂದು ಬಾಟಲ್‌ನಲ್ಲಿ ಹಾಕಿ ಡಬ್ಲ್ಯೂ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಳ್ಳಲಾಯಿತು. ಆ ಬಾಟಲ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂ.ಓ.3 ಎಂದು ಗುರುತಿಸಲಾಗಿದೆ. ಅದರ ಮೇಲೆ ನನ್ನ ಸಹಿ ಇದೆ.

25. ನಂತರ ಆರೋಪಿ - ವನಸ್ವಾಮಿಗೆ ಪಿರ್ಯಾದಿಯಿಂದ ಕೇಳಿ ಪಡೆದಿದ್ದ ಲಂಚದ ಹಣದ ಬಗ್ಗೆ ವಿಚಾರಿಸಿದೆನು. ಆಗ ಸದರಿ ಆರೋಪಿ ತನ್ನ ಪ್ಯಾಂಟಿನ ಜೇಬಿನಲ್ಲಿ ಇಟ್ಟುಕೊಂಡಿದ್ದ ಲಂಚದ ಹಣವನ್ನು ತೆಗೆದು ಹಾಜರುಪಡಿಸಿದರು. ಆ ಹಣವನ್ನು ಪಂಚ – 1 ಇವರಿಗೆ ಕೊಟ್ಟು ಪರಿಶೀಲಿಸುವಂತೆ ಹೇಳಿದೆನು. ಅದರಂತೆ ಪಂಚ – 1 ಇವರು ಆ ನೋಟುಗಳನ್ನು ಪರಿಶೀಲಿಸಿ ನಿಪಿ.30 ರೊಂದಿಗೆ ತಾಳೆ ಮಾಡಿ ಅದೇ ನೋಟುಗಳು ಎಂದು ದೃಢಪಡಿಸಿದರು. ಆ ನೋಟುಗಳನ್ನು ಒಂದು ಖಾಲಿ ಕವರಿನಲ್ಲಿ ಹಾಕಿ ಡಬ್ಲ್ಯೂ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಳ್ಳಲಾಯಿತು.

26. ನಂತರ ನಾನು ನಮ್ಮ ಸಿಬ್ಬಂದಿ ಬೋರೆಗೌಡರ ಮೂಲಕ ಒಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಲಾಯಿತು. ನಂತರ 2 ನೇ ಆರೋಪಿ - ವನಸ್ವಾಮಿ ಒಂದು ಪಂಚೆಯ ವ್ಯವಸ್ಥೆ ಮಾಡಿ ಅವರು ತೊಟ್ಟಿದ್ದ ಪ್ಯಾಂಟನ್ನು ತೆಗೆಸಿ, ಸದರಿ ಪ್ಯಾಂಟಿನ ಬಲಭಾಗದ ಜೇಬಿನ ಒಳಭಾಗವನ್ನು ಸದರಿ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ ಸದರಿ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಸದರಿ ದ್ರಾವಣವನ್ನು ಒಂದು ಬಾಟಲ್‌ನಲ್ಲಿ ಹಾಕಿ ಡಬ್ಲ್ಯೂ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಳ್ಳಲಾಯಿತು. ಆ ಬಾಟಲ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂ.ಓ.4 ಎಂದು ಗುರುತಿಸಲಾಗಿದೆ. ಅದರ ಮೇಲೆ ನನ್ನ ಸಹಿ ಇದೆ.

27. ನಂತರ 2 ನೇ ಆರೋಪಿ - ವನಸ್ವಾಮಿಯ ಕಪ್ಪು ಬಣ್ಣದ ಪ್ಯಾಂಟನ್ನು ಒಂದು ಖಾಲಿ ಕವರಿಗೆ ಹಾಕಿ ವಶಪಡಿಸಿಕೊಂಡೆನು. ಸದರಿ ಪ್ಯಾಂಟಾದ ಎಂ.ಓ.5 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**28.** ನಂತರ ಪಿರ್ಯಾದಿಗೆ ನಾನು ಕೊಟ್ಟಿದ್ದ ವಾಯ್ಸ ರೆಕಾರ್ಡರನ್ನು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ಅವರು ತಮ್ಮ ಬಳಿಯಿದ್ದ ವಾಯ್ಸ ರೆಕಾರ್ಡರನ್ನು ಹಾಜರುಪಡಿಸಿದರು ಹಾಗೂ ಅದರಲ್ಲಿ ತಾನು ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

**29.** ನಂತರ ಆರೋಪಿ - ನಾಗರಾಜುರವರಿಗೆ ಪಿರ್ಯಾದಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸುವಂತೆ ಸೂಚಿಸಿದಾಗ, ಅವರು ಸದರಿ ದಾಖಲಾತಿಗಳು ಗ್ರಾಮ ಲೆಕ್ಕಾಧಿಕಾರಿ - ನಾಗೇಂದ್ರರವರಿಗೆ ನೀಡಿರುತ್ತೇನೆಂದು ಹೇಳಿರುತ್ತಾರೆ. ನಂತರ ಅಮಾನತ್ತುಪಡಿಸಿಕೊಳ್ಳಲು ಉಪಯೋಗಿಸಿದ ಡಬ್ಲ್ಯೂ ಎಂಬ ಸೀಲನ್ನು ಮಾದರಿಗಾಗಿ ಬಿಳಿ ಹಾಳೆಗಳಲ್ಲಿ ತೆಗೆದುಕೊಂಡು ಸೀಲನ್ನು ಪಂಚ – **1** ಇವರ ವಶಕ್ಕೆ ಕೊಟ್ಟು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ತಿಳಿಸಿದೆನು. ಮಾದರಿ ಸೀಲು ಪತ್ರವಾದ ನಿಪಿ.**31** ನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ.**31**(ಬಿ) ಎಂದು ಗುರುತಿಸಲಾಯಿತು. ಆ ಬಗ್ಗೆ ಪಂಚ – **1** ಇವರ ಸ್ವೀಕೃತಿ ಪತ್ರವನ್ನು ಪಡೆದುಕೊಂಡಿದ್ದನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.**32** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.**32**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ.**9** ಸೀಲನ್ನು ನೋಡಿ ಗುರುತಿಸಿರುತ್ತಾರೆ.

**30.** ನಂತರ ಪಿರ್ಯಾದಿ ಹಾಗೂ ಪಂಚರನ್ನು ಘಟನೆಯ ಬಗ್ಗೆ ವಿವರವಾಗಿ ಕೇಳಿ ತಿಳಿದುಕೊಂಡಿರುತ್ತೇನೆ. ನಂತರ ಈ ಘಟನೆಯ ಬಗ್ಗೆ ಆರೋಪಿತರ ವಿವರಣೆಯನ್ನು ಕೇಳಿದೆನು. ಆಗ ಆರೋಪಿತರು ತಮ್ಮ ತಮ್ಮ ವಿವರಣೆಯನ್ನು ಬರೆದುಕೊಟ್ಟಿದ್ದಾರೆ. ಆ ಸಮಜಾಯಿಷಿ ಪತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ.**34** ಮತ್ತು ನಿಪಿ.**35** ಎಂದು ಗುರುತಿಸಲಾಗಿದೆ. ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ.**34**(ಸಿ) ಮತ್ತು ನಿಪಿ.**35**(ಸಿ) ಎಂದು ಗುರುತಿಸಲಾಯಿತು.

**31.** ನಂತರ ಸದರಿ ಸಮಜಾಯಿಷಿಗಳ ಬಗ್ಗೆ ಪಿರ್ಯಾದಿ ಮತ್ತು ಪಂಚ - **1** ರವರನ್ನು ಕೇಳಿದಾಗ ಅವರುಗಳು ಸದರಿ ಸಮಜಾಯಿಷಿಗಳು ಸತ್ಯಕ್ಕೆ ದೂರವಾಗಿವೆ ಎಂದು ಹೇಳಿರುತ್ತಾರೆ.

**32.** ನಂತರ ಘಟನೆ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿದೆನು. ಆ ನಕ್ಷೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.**14** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.**14**(ಸಿ) ಎಂದು ಗುರುತಿಸಲಾಯಿತು.

**33.** ಈ ಎಲ್ಲಾ ವಿದ್ಯಾಮಾನಗಳ ಬಗ್ಗೆ ಫೋಟೋಗಳನ್ನು ತೆಗೆಸಿರುತ್ತೇನೆ, ಸದರಿ ಫೋಟೋಗಳನ್ನು ಈಗಾಗಲೇ ನಿಪಿ.**15** ರಿಂದ ನಿಪಿ.**21** ಎಂದು ಗುರುತಿಸಲಾಗಿದೆ.

**34.** ಆರೋಪಿತರ ಕಚೇರಿಯಲ್ಲಿ ವಿದ್ಯುತ್ ಸರಬರಾಜು ಇಲ್ಲದ ಕಾರಣ ಅಲ್ಲೇ ಹತ್ತಿರದಲ್ಲಿದ್ದ ಸೋಲೂರು ಹೊರ ಠಾಣೆಗೆ ಬಂದು ವಿದ್ಯುತ್ ಸಂಪರ್ಕ ಪಡೆದುಕೊಂಡು ಟ್ರಾಪ್ ನಡವಳಿಗಳ ಬಗ್ಗೆ ಒಂದು ಟ್ರಾಪ್ ಮಹಜರ್ ಬರೆಯಲಾಯಿತು. ಆ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.**4** ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.**4**(ಡಿ) ಎಂದು ಗುರುತಿಸಲಾಯಿತು.

**35.** ಆರೋಪಿತರನ್ನು ದಸ್ತಗಿರಿ ಮಾಡಿದ ಬಗ್ಗೆ ತಿಳುವಳಿಕೆಯನ್ನು ಚಂದ್ರಶೇಖರ್ ಮತ್ತು ಹರೀಶಕುಮಾರ ಎನ್ನುವವರಿಗೆ ನೀಡಿರುತ್ತೇನೆ. ಆ ಪತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ.**42** ಮತ್ತು ನಿಪಿ.**43** ಎಂತಲೂ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ಈಗ ನಿಪಿ.**42**(ಎ) ಮತ್ತು ನಿಪಿ.**43**(ಎ) ಎಂದು ಗುರುತಿಸಲಾಯಿತು.

**36.** ನಂತರ ಆರೋಪಿತರು, ಪಂಚರು ಹಾಗೂ ಪಿರ್ಯಾದಿಯೊಂದಿಗೆ ಲೋಕಾಯುಕ್ತ ಕಚೇರಿಗೆ ಮರಳಿ ರಿಮ್ಯಾಂಡ್ ಅರ್ಜಿಯೊಂದಿಗೆ ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

**37.** ಟ್ರಾಪ್ ಪಂಚನಾಮೆ ಕಾಲದಲ್ಲಿ ವಶಪಡಿಸಿಕೊಂಡ ಮಾಲುಗಳನ್ನು ಮಾಲುಪಟ್ಟಿಗೆ ಅಳವಡಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ರಮೇಶ, ಶ್ರೀನಿವಾಸ, ಕೃಷ್ಣಪ್ಪ, ಚಂದ್ರಶೇಖರ್, ಹರೀಶಕುಮಾರ ಇವರುಗಳನ್ನು ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ.

**38.** ತಾಃ **15.12.2010** ರಂದುತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರಾದ ಶಿವಯ್ಯ, ನಾಗೇಶ, ಕೆಂಪೇಗೌಡ ಹಾಗೂ ಸಿಬ್ಬಂದಿಗಳಾದ ಪ್ರಭುರಾಜೇಅರಸ್,

ಬೋರೇಗೌಡ, ಶಿವಕುಮಾರ ಸ್ವಾಮಿ ಹಾಗು ಕೃಷ್ಣಮೂರ್ತಿ ಇವರುಗಳ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ.

**39.** ನಂತರ ಮಾಗಡಿ ತಾಲ್ಲೂಕು ತಹಶೀಲ್ದಾರರಿಗೆ ಪಿರ್ಯಾದಿಗೆ ಸಂಬಂಧಪಟ್ಟ ಜಮೀನಿನ ದಾಖಲೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಪತ್ರ ಬರೆದಿರುತ್ತೇನೆ.

**40.** ನಂತರ ಲೋಕೋಪಯೋಗಿ ಇಲಾಖೆಯವರಿಗೆ ಘಟನಾ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಕೋರಿರುತ್ತೇನೆ. ಆರೋಪಿಯ ಸೇವಾ ವಿವರ ಮಾಹಿತಿಯನ್ನು ಕೊಡುವಂತೆ ಮಾಗಡಿಯ ತಹಶೀಲ್ದಾರ್‌ರವರಿಗೆ ಪತ್ರ ಬರೆದಿರುತ್ತೇನೆ.

**41.** ನಂತರ ವಶಪಡಿಸಿಕೊಂಡ ವಸ್ತುಗಳನ್ನು ಸಿಬ್ಬಂದಿಯ ಮೂಲಕ ರಾಸಾಯನಿಕ ಪರೀಕ್ಷಕರು, ಸಾರ್ವಜನಿಕ ಆರೋಗ್ಯ ಸಂಸ್ಥೆ, ಬೆಂಗಳೂರು ಇವರಿಗೆ ಕಳುಹಿಸಿಕೊಟ್ಟಿರುತ್ತೇನೆ.

**42.** ತಾಃ **30.12.2010** ರಂದು ಸಾಕ್ಷಿದಾರರಾದ - ನಾಗೇಂದ್ರರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ.

**43** ತಾಃ **02.01.2011** ರಂದು ಸಾಕ್ಷಿ - ಮುದ್ದಮ್ಮರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ.

**44.** ತಾಃ **04.01.2011** ರಂದು ಪಂಚ – **1** ನಾಗೇಶರವರನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಿ, ಅಭಿಯಂತರರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸುವಂತೆ ಸೂಚನೆ ನೀಡಿರುತ್ತೇನೆ. ಸದರಿ ನಾಗೇಶರವರು ಸ್ಥಳವನ್ನು ತೋರಿಸಿ ಬಂದು ಹೇಳಿಕೆ ನೀಡಿರುತ್ತಾರೆ. ಅದೇ ದಿನ ಸಾಕ್ಷಿದಾರರಾದ ಕೆಂಪೇಗೌಡರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋಗಳನ್ನು ತೋರಿಸಿ, ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ.

**45.** ನಂತರ ಲೋಕೋಪಯೋಗಿ ಇಲಾಖೆಯಿಂದ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಪಡೆದಿರುತ್ತೇನೆ. ಸದರಿ ನಕ್ಷೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.**33** ಎಂದು ಗುರುತಿಸಲಾಗಿದೆ.

**46.** ತಾಃ **31.01.2011** ರಂದು ರಾಸಾಯನಿಕ ತಜ್ಞರ ವರದಿಯನ್ನು ಸ್ವೀಕರಿಸಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.**37** ಎಂದು ಗುರುತಿಸಲಾಗಿದೆ.

**47.** ತಾಃ **01.02.2011** ರಂದು ಮಾಗಡಿಯ ತಹಶೀಲ್ದಾರರವರಿಂದ ಪಿರ್ಯಾದಿಗೆ ಸಂಬಂಧಿಸಿದ ಜಮೀನಿನ ಬಗ್ಗೆ ಮಾಹಿತಿಯನ್ನು ಹಾಗೂ ದೃಢೀಕೃತ ದಾಖಲಾತಿಗಳನ್ನು ಸ್ವೀಕರಿಸಿರುತ್ತೇನೆ. ಆ ಬಗ್ಗೆ ಬರೆದ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ.**44** ಎಂದು ಗುರುತಿಸಲಾಯಿತು. ಸದರಿ ದಾಖಲೆಗಳ ನಕಲುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ.**29** ಎಂದು ಗುರುತಿಸಲಾಗಿದೆ.

**48.** ತಾಃ **03.02.2011** ರಂದು ಆರೋಪಿಯ ಸೇವಾ ವಿವರನ್ನು ಪಡೆದಿರುತ್ತೇನೆ. ಆರೋಪಿಯ ಸೇವಾ ವಿವರ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.**36** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ಈಗ ನಿಪಿ.**36**(ಎ) ಎಂದು ಗುರುತಿಸಲಾಯಿತು.

**49.** ನಂತರ ನನಗೆ ಬೆಂಗಳೂರಿಗೆ ವರ್ಗಾವಣೆಯಾಗಿದ್ದರಿಂದ ನಿಜಾಮುದ್ದೀನ್‌ರವರಿಗೆ ಮುಂದಿನ ತನಿಖೆಯನ್ನು ವಹಿಸಿಕೊಟ್ಟೆನು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**(ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**